ಗಡಿಯಾರವನ್ನೇ ನೋಡುತ್ತಾ ನೋಡುತ್ತಾ ಮತ್ತೆ ಅಡ್ಡಾದವರಿಗೆ ಗಡಿಯಾರದ ಮುಳ್ಳುಗಳು ಎಷ್ಟೋ ಹೊತ್ತಿನಿಂದಲೂ ಮೂರು ಹಾಗೂ ಹನ್ನೆರಡರ ಮೇಲೇ ನಿಂತಿವೆಯೆನ್ನಿಸಿ ಮತ್ತೆ ಕಣ್ಣಗಲಿಸಿ ಗಡಿಯಾರವನ್ನೇ ನೋಡಿದರು. ಗಡಿಯಾರ ನಿಂತು ಹೋಗಿತ್ತು. ನಗು ಬಂತು.

ನಕ್ಕ ಮರುಗಳಿಗೆಗೇ ದಿಗಿಲಾಯಿತು. ಬಾಲ್ಯದಿಂದಲೂ ಶಕುನಗಳನ್ನು ನಂಬುತ್ತಾ, ತನ್ನ ಜೊತೆಯವರನ್ನೂ ನಂಬಿಸಲೆತ್ನಿಸುತ್ತಿದ್ದ ರುದ್ರಣ್ಣನವರಿಗೆ ಗಡಿಯಾರ ನಿಂತುಹೋಗಿರುವ ಶಕುನ ಕೂಡ ಪ್ರಭುದೇವಸ್ವಾಮಿಗಳ ವಾಕ್ಯವನ್ನೇ ಹೇಳುತ್ತಿರಬಹುದೇನೋ... ಎಂಬ ಅನುಮಾನ ಹುಟ್ಟಿತು; ಎದೆ ನೋಯುತ್ತಿದೆ ಅನ್ನಿಸಿತು. ಎದೆಯ ಯಾವ ಕಡೆ ನೋಯಲು ಶುರುವಾದರೆ ಹಾರ್ಟ್ ಅಟ್ಯಾಕ್ ಆಗುತ್ತದೆ? ಈ ನಟ್ಟ ನಡುರಾತ್ರಿ ಯಾವ ಡಾಕ್ಟರನ್ನು ಕೇಳುವುದು? ಎದ್ದು ರೀಡಿಂಗ್ ರೂಮಿಗೆ ಹೋಗಿ ಕೈ ಗಡಿಯಾರ ನೋಡಿ ಟೈಮೆಷ್ಟೆಂದು ನೋಡಬೇಕೆಂದುಕೊಂಡರು. ಯಾಕೋ ಮೇಲೇಳಲಾಗಲಿಲ್ಲ. ಹೀಗೆ ಮೇಲೇಳಲಾಗದಿರುವುದು ಕೂಡ ಸಾವಿನ ಬರವನ್ನು ಸೂಚಿಸುತ್ತಿರಬಹುದೇ ಎಂಬ ದಿಗಿಲು ಮುತ್ತತೊಡಗಿತು...

ಆವರೆಗೆ ಆರಾಮಾಗಿ ಬಹುತೇಕ ಬಿಡುಬೀಸಾಗಿಯೇ ಜೀವನ ನಡೆಸಿಕೊಂಡು ಎಪ್ಪತ್ತು ವರ್ಷ ಕಳೆದಿದ್ದರೂ ರುದ್ರಣ್ಣನವರಿಗೆ ಸಾವು ಎಂಬುದರ ಯೋಚನೆ ಮಾತ್ರ ಈ ನಡುರಾತ್ರಿಯ ತನಕ ಅಷ್ಟಾಗಿ ಕಾಡಿರಲಿಲ್ಲ. ದಿನ ಬೆಳಗಾಗೆದ್ದು ಬೆಡ್ ಕಾಫಿ, ಒಂದು ಗಂಟೆ ವಾಕಿಂಗು, ಆಮೇಲೆ ನಾಷ್ಟಾ, ಮಧ್ಯಾಹ್ನ ಊಟ, ಊಟದ ನಂತರ ಸಣ್ಣ ನಿದ್ದೆ, ದಿನಕ್ಕೆ ಐದಾರು ಸಲ ಟೀ, ವಾರಕ್ಕೊಂದು ಸಲ ಗೆಳೆಯರ ಜೊತೆ ಇಸ್ಪೀಟು, ತಿಂಗಳಲ್ಲಿ ಒಂದೆರಡು ದಿನ ಅಪರೂಪಕ್ಕೆ ಎರಡು ಪೆಗ್ ವಿಸ್ಕಿ...ರಾತ್ರಿ ಹತ್ತು ಗಂಟೆಯ ಸುಮಾರಿಗೆ ಯಾವುದಾದರೂ ಕತೆ ಪುಸ್ತಕ ಓದುತ್ತಾ ದಿಂಬಿಗೆ ತಲೆಯಿಟ್ಟರೆ ಬೆಳಗ್ಗೆ ಏಳು ಗಂಟೆಯವರೆಗೂ ಲೋಕದಲ್ಲಿ ಏನಾಗುತ್ತಿದೆಯೆಂಬುದು ಕೂಡ ಗೊತ್ತಾಗದಂಥ ಸುಖ ನಿದ್ರೆ. ಕೆಲಸದಲ್ಲಿದ್ದಾಗಲೂ ಮಧ್ಯಾಹ್ನದ ಲಂಚ್ ಬ್ರೇಕಿನ ನಂತರ ಮನೆಗೆ ಬಂದ ಮೇಲೆ ಎಂದೂ ವಾಪಸ್ ಆಫೀಸಿಗೆ ಹೋಗದ ರುದ್ರಣ್ಣನವರದು ನಲವತ್ತು ವರ್ಷಗಳಿಂದ ಹೆಚ್ಚೂ ಕಡಿಮೆ ಇದೇ ದಿನಚರಿಯಾಗಿತ್ತು. ಕೆಲಸದಿಂದ ರಿಟೈರ್ಡ್ ಆದ ಮೇಲಂತೂ ಈ ದಿನಚರಿ ಇನ್ನಷ್ಟು ವಿರಾಮವಾಗಿ ಮುಂದುವರೆದಿತ್ತು. ಜೊತೆಗೆ, ವಾರದಲ್ಲಿ ಒಂದೋ ಎರಡೋ ಸಂಜೆ ರೋಟರಿ ಕ್ಲಬ್ಬು, ಕನ್ನಡ ಸಂಘ, ಕಲಾ ಪರಿಷತ್ತು ಹೀಗೆ ಒಂದಲ್ಲ ಒಂದು ಕಡೆ ಮುಖ್ಯ ಅತಿಥಿ, ಉದ್ಘಾಟನೆ, ಅಧ್ಯಕ್ಷತೆ... ಏನಾದರೂ ಒಂದು ಆಹ್ವಾನ ಇದ್ದೇ ಇರುತ್ತಿತ್ತು.

ತಮ್ಮ ಸಂಜೆಯ ಭಾಷಣ ನಡೆದ ಮಾರನೆಯ ಬೆಳಗ್ಗೆ ಪೇಪರಿನಲ್ಲಿ ಫೋಟೊ ನೋಡಿದಾಗಂತೂ ತಾನಿನ್ನೂ ಎಪ್ಪತ್ತಾದವನಂತೆ ಕಾಣುವುದಿಲ್ಲ ಎನ್ನಿಸಿ ರುದ್ರಣ್ಣ ಒಳಗೊಳಗೇ ಉಬ್ಬುವರು. ಅದೇ ಮಾತನ್ನು ಮೊನ್ನೆ ಭಾಷಣಕ್ಕೆ ಬಂದಿದ್ದ ಕ್ಲಾಸ್‌ಮೇಟ್ ಕನಕಮ್ಮನೂ ಹೇಳಿದ್ದು ನೆನಪಾಗಿ, ತಾನೀಗ ಹಿರೀಕನೆಂಬ ಸಲುಗೆಯಲ್ಲಿ ಅವಳ ಕೆನ್ನೆ ಸವರಿದ್ದು, ಅವಳ ಕೆನ್ನೆ ಇನ್ನೂ ಮೃದುವಾಗಿಯೇ ಇದ್ದದ್ದು, ಆ ಮೃದುತನ ಸೋಕಿ ಸರ್ರನೆ ತಮ್ಮ ಮೈ ಕೂದಲು ನಿಮಿರಿ ನಿಂತಿದ್ದು... ಎಲ್ಲವೂ ನೆನಪಾಗಿ ತಮ್ಮ ಲೈಂಗಿಕ ಸತ್ವದ ನಿತ್ಯನೂತನತೆಯ ಬಗ್ಗೆ ರುದ್ರಣ್ಣನವರಿಗೆ ಹೆಮ್ಮೆಯಾಯಿತು. ರಿಟೈರಾದ ಮೇಲೆ ರುದ್ರಣ್ಣ ಹೀಗೆ ಯಾವುದೇ ಹಳೆಯ ಪರಿಚಯಸ್ಥ ಮಹಿಳೆಯರು ಸಿಕ್ಕಾಗ ಹಿರೀಕರ ಹುಡುಗಾಟದ ಶೈಲಿಯಲ್ಲಿ ಕೊನೆಯ ಪಕ್ಷ ಅವರ ಕೆನ್ನೆ ಹಿಂಡುವುದನ್ನೋ, ಇನ್ನಷ್ಟು ಸಲುಗೆಯಿದ್ದರೆ ಅವರ ಬೆನ್ನು ಸವರುವುದನ್ನೋ ರೂಢಿ ಮಾಡಿಕೊಂಡಿದ್ದರು! ಇದೀಗ ಮಿಂಚಿನ ವೇಗದಲ್ಲಿ ಆ ಹೆಣ್ಣು ಕೆನ್ನೆಗಳೆಲ್ಲ ಫೇರ್ ಅಂಡ್ ಲವ್ಲಿ ಜಾಹೀರಾತಿನಲ್ಲಿ ಕಾಣುವ ಒಂದೇ ಹೆಣ್ಣಿನ ನಾಲ್ಕು ಮುಖಗಳ ಹಾಗೆ ಒಂದರ ಬದಿಗೊಂದು ಇಸ್ಪೀಟ್ ಎಲೆಗಳ ಹಾಗೆ ಜೋಡಿಸಿಕೊಂಡು ತೇಲಿ ತೇಲಿ ಬಂದಂತಾಗಿ ರುದ್ರಣ್ಣ ಒಂಚೂರು ಗೆಲುವಾದರು. ಪ್ರಭುದೇವಸ್ವಾಮಿಗಳು ಆ ರಾತ್ರಿ ಅಲ್ಲಾಡಿಸಿದ ಸಾವಿನ ಗಂಟೆಯ